ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

# ಮೇನಲ್ಲಿ ಕರೊನಾ ತಾರಕಕ್ಕೆ

## ಸರ್ಕಾರವನ್ನು ಆತಂಕಕ್ಕೆ ತಳ್ಳಿದ ತಜ್ಞರ ವರದಿ | ಪ್ರಧಾನಿ-ಬಿಎಸ್‌ವೈ ಸಮಾಲೋಚನೆ

12-4-21

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕರೊನಾ ವೈರಾಣು ಸೋಂಕಿನ ವಿಚಾರದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಈ ಬಾರಿ ಜನರ ಆತಂಕ ಕಡಿಮೆಯಾಗಿದ್ದರೂ ಸಂಭಾವ್ಯ ಅನಾಹುತ ಕುರಿತಂತೆ ತಜ್ಞರು ನೀಡಿರುವ ಗಂಭೀರ ಎಚ್ಚರಿಕೆ ಸರ್ಕಾರವನ್ನು ಆತಂಕಕ್ಕೆ ತಳ್ಳಿದೆ. ಎರಡನೇ ಅಲೆ ಸೋಂಕು ಹರಡುವಿಕೆಯ ವೇಗ ತೀವ್ರವಾಗಿದ್ದು, ಮುಂದಿನ 2 ತಿಂಗಳು ನಿರ್ಣಾಯಕವೆಂಬ ತಜ್ಞರ ಎಚ್ಚರಿಕೆ ಹಿನ್ನೆಲೆಯಲ್ಲಿ ಜನರ ಜೀವ, ಜೀವನೋಪಾಯ ರಕ್ಷಣೆ ಜತೆಗೆ ವೈರಸ್ ನಿಯಂತ್ರಣ ಕ್ರಮಗಳಿಗೆ ಸರ್ಕಾರ ಆದ್ಯತೆ ನೀಡಿದೆ. ಮತ್ತೊಂದೆಡೆ ಬಿಡುವಿಲ್ಲದ ಚುನಾವಣೆ ಪ್ರಚಾರ ಕಾರ್ಯದ ನಡುವೆಯೂ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ,ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದೂರವಾಣಿ ಮುಖೇನ ಚರ್ಚೆ ನಡೆಸಿ, ಕರೊನಾ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳನ್ನು ವಿವರಿಸಿದ್ದಾರೆ. ಭಾನುವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ತಾಂತ್ರಿಕ ಸಲಹಾ ಸಮಿತಿಯ ತುರ್ತು ಸಭೆ ಕರೆದಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ. ಸುಧಾಕರ್ ಮುಂದಿನ ನಡೆ ಬಗ್ಗೆ ಚರ್ಚಿಸಿದರು. ಮೇ 3ನೇ ವಾರದವರೆಗೆ ತಾರಕಕ್ಕೇರಲಿದೆ ಎನ್ನಲಾದ ಕರೊನಾ ಪ್ರಕರಣಗಳ ನಿಯಂತಣಕ್ಕೆ ಕೈಗೊಳ್ಳಬೇಕಾದ ಕ್ರಮಗಳು ಕುರಿತು ವಿಚಾರ ವಿನಿಮಯ ನಡೆಸಿ ಸಿಎಂಗೆ ವಿಸ್ತೃತ ವರದಿ ನೀಡಲು ಭೂಮಿಕೆ ಸಿದ್ಧಪಡಿಸಿದರು. ●ಪುಟ 3



**ಕರೊನಾ ವಿರುದ್ಧದ ಸಮರದಲ್ಲಿ ಲಸಿಕೆ ಸುರಕ್ಷಾ ಕವಚ ವಾಗಿದೆ. 45 ವರ್ಷ ಮೇಲ್ಪಟ್ಟ ಎಲ್ಲರೂ ಲಸಿಕೆ ಪಡೆಯಿರಿ, ಏ.14ರವರೆಗೆ 'ಲಸಿಕೆ ಉತ್ಸವ'ದಲ್ಲಿ ಪಾಲ್ಗೊಳ್ಳಿ, ಪ್ರೇರೇಪಿಸಿ, ಜಾಗೃತಿ ಮೂಡಿಸಿರಿ. ಜತೆಗೆ ಸುರಕ್ಷತಾ ನಿಯಮಗಳನ್ನು ತಪ್ಪದೆ ಪಾಲಿಸಿರಿ.**

| **ಬಿ.ಎಸ್.ಯಡಿಯೂರಪ್ಪ** ಮುಖ್ಯಮಂತ್ರಿ

### ಮಸ್ಕಿ ಬಿಜೆಪಿ ಅಭ್ಯರ್ಥಿಗೆ ಕರೊನಾ ▶7



ತಜ್ಞರ ಜತೆಗಿನ ಸಭೆಯಲ್ಲಿ ಸಚಿವ ಡಾ.ಕೆ. ಸುಧಾಕರ್.

### ತಜ್ಞರ ಸಲಹೆಗಳು

- ಏಪ್ರಿಲ್ ಎರಡನೇ ವಾರದಿಂದ ಮೇ ಮೂರನೇ ವಾರದವರೆಗೆ ನಿರ್ಣಾಯಕ
- ಔಷಧ, ಚುಚ್ಚುಮದ್ದು, ಮಾತ್ರೆ, ಐಸಿಯು, ಅಂಬುಲೆನ್ಸ್ ವ್ಯವಸ್ಥೆ ಹೆಚ್ಚಳ
- 144ನೇ ಕಲಂ ಅನ್ವಯ ನಿಷೇಧಾಜ್ಞೆ ಪರಿಣಾಮಕಾರಿ ಅನುಷ್ಠಾನ
- ಜಾತ್ರೆ, ಉತ್ಸವ ಇನ್ನಿತರ ಸಭೆ-ಸಮಾರಂಭಗಳನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಬೇಕು
- ಬೆಂಗಳೂರಿನಲ್ಲಿರುವ ಹೊರ ರಾಜ್ಯಗಳ ಕಾರ್ಮಿಕರಿಗೆ ಚಿಕಿತ್ಸಾ ಸೌಲಭ್ಯಗಳ ಅರಿವು
- ಚಾಟ್ಸ್, ಐಸ್‌ಕ್ರೀಮ್ ಪಾರ್ಲರ್, ಫುಡ್ ಸ್ಟ್ರೀಟ್‌ಗಳಲ್ಲಿ ಜನದಟ್ಟಣೆ ತಡೆಯಬೇಕು
- ಉದ್ಯಮ, ವಾಣಿಜ್ಯ-ವಹಿವಾಟು ಚಟುವಟಿಕೆಗಳಿಗೆ ಸಮಸ್ಯೆ ಉಂಟಾಗದಂತೆ ಕ್ರಮ

### ರಾಜ್ಯದ ಕ್ರಮಕ್ಕೆ ಮೋದಿ ಮೆಚ್ಚುಗೆ



ರಾಜ್ಯದಲ್ಲಿ ಕೈಗೊಂಡಿರುವ ಕರೊನಾ ಕಟ್ಟಿಹಾಕುವ ಕಾರ್ಯತಂತ್ರಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದು, ಸೂಕ್ಷ್ಮ ನಿಯಂತ್ರಿತ ವಲಯಗಳ ಬಗ್ಗೆ ಹೆಚ್ಚಿನ ಗಮನವಿಡಲು ಸಿಎಂ ಯಡಿಯೂರಪ್ಪ ಅವರಿಗೆ ಸಲಹೆ ನೀಡಿದ್ದಾರೆ.

### ರಾಜ್ಯದಲ್ಲಿ ಒಂದೇ ದಿನ 10,250 ಕೇಸ್

**» ಭಾರತದಲ್ಲಿ 1.50 ಲಕ್ಷ ಪ್ರಕರಣ**

**ಕ**ರೊನಾಕ್ಕೆ ತುರ್ತು ಕಡಿವಾಣ ಹಾಕುವಂತೆ ತಜ್ಞರು ಎಚ್ಚರಿಕೆ ನೀಡಿರುವ ಬೆನ್ನಲ್ಲೇ ಭಾನುವಾರ ರಾಜ್ಯಾದ್ಯಂತ 10,250 ಹೊಸ ಕರೊನಾ ಪ್ರಕರಣಗಳು ವರದಿಯಾಗಿವೆ. ಈ ಪೈಕಿ ಬೆಂಗಳೂರಿನಲ್ಲೇ 7,584 ಜನರಿಗೆ ಸೋಂಕು ದೃಢಪಟ್ಟಿದೆ. ಇದೇ ಅವಧಿಯಲ್ಲಿ ಒಟ್ಟು 40 ಜನರು ಮಹಾಮಾರಿಗೆ ಬಲಿಯಾಗಿದ್ದು, ಬೆಂಗಳೂರು ಒಂದರಲ್ಲೇ 27 ಸೋಂಕಿತರು ಅಸುನೀಗಿದ್ದಾರೆ. ರಾಜ್ಯದಲ್ಲಿ ಕರೊನಾ ಪ್ರಕರಣಗಳ ಒಟ್ಟು ಸಂಖ್ಯೆ 10,65,290ಕ್ಕೆ ಏರಿಕೆಯಾಗಿದೆ. ಮತ್ತೊಂದೆಡೆ ಭಾನುವಾರ ಬೆಳಗಿನವರೆಗಿನ 24 ಗಂಟೆ ಅವಧಿಯಲ್ಲಿ ಭಾರತದಲ್ಲಿ 1,52,879 ಹೊಸ ಕರೊನಾ ವೈರಸ್ ಪ್ರಕರಣ ಪತ್ತೆಯಾಗಿದೆ.




### ಜನ ಸಹಕರಿಸದಿದ್ದರೆ ಲಾಕ್‌ಡೌನ್ ಅನಿವಾರ್ಯ



ಆರೋಗ್ಯ ಸಚಿವ ಡಾ.ಸುಧಾಕರ್ ಎಚ್ಚರಿಕೆ

...ಪುಟ-9...

# ಮುಂದಿನ ತಿಂಗಳಲ್ಲಿ ಕರೊನಾ ಹರಡುವಿಕೆ ತಾರಕಕ್ಕೆ

ಮೊದಲನೇ ಪುಟದಿಂದ...

**ತಜ್ಞರ ಎಚ್ಚರಿಕೆ:** ಕರೊನಾ 2ನೇ ಅಲೆ 80-120 ದಿನಗಳವರೆಗೆ ಇರಲಿದೆ. ಮೇನಲ್ಲಿ ಸೋಂಕು ಹೆಚ್ಚಳದ ಸಾಧ್ಯತೆ ಬಗ್ಗೆ ತಜ್ಞರು ಎಚ್ಚರಿಸಿದ್ದಾರೆ. ಮೇ ಅಂತ್ಯದ ವೇಳೆ ಸೋಂಕು ಇಳಿಮುಖವಾಗಲಿದೆ ಎಂದು ಸಚಿವ ಸುಧಾಕರ್ ತಿಳಿಸಿದ್ದು, ಪೂರಕವಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಗಿದೆ. ನಿರ್ದಿಷ್ಟ ಕ್ರಮಗಳ ಕುರಿತು ಸಿಎಂ ಬಿಎಸ್‌ವೈ ಜತೆಗೆ ಚರ್ಚಿಸಿ ಒಪ್ಪಿಗೆ ಪಡೆಯಬೇಕಾಗುತ್ತದೆ ಎಂದರು.

ಸರ್ಕಾರ ಮೊದಲಿಗೆ ಪ್ರಾರಂಭಿಸಿದ ಟೆಲಿ ಐಸಿಯು ವ್ಯವಸ್ಥೆಗೆ ಉತ್ತಮ ಸ್ಪಂದನೆ ದೊರೆತಿದೆ. ಈ ಕ್ರಮಕ್ಕೆ ಖಾಸಗಿ ಆಸ್ಪತ್ರೆಗಳು ಕೈಜೋಡಿಸಿ ಉಚಿತ ಸೇವೆ ಒದಗಿಸಿದೆ. ಈ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕು ಎಂಬುದು ತಜ್ಞರು ಸಲಹೆಯಾಗಿದೆ ಎಂದರು.

**ಬೆಂಗಳೂರು ಅಲ್ಪಾವಧಿ ಲಾಕ್?:** ಕರೊನಾ ಸ್ಫೋಟ ನಿಯಂತ್ರಿಸಲು ರಾಜಧಾನಿಗೆ ಸೀಮಿತವಾಗಿ ಅಲ್ಪಾವಧಿ ಲಾಕ್‌ಡೌನ್



**ಈಗಿನ ಪರಿಸ್ಥಿತಿಯಲ್ಲಿ ಲಾಕ್‌ಡೌನ್ ಅನಗತ್ಯ. ಮೇ 15ರೊಳಗೆ 15,000-18,000 ಸೋಂಕು ಪ್ರಕರಣಗಳು ವರದಿಯಾಗಲಿವೆ. ಆದರೆ ಜನರು ಭಯಭೀತರಾಗದೆ ಮುನ್ನೆಚ್ಚರಿಕೆ ನಿಯಮಗಳನ್ನು ತಪ್ಪದೇ ಪಾಲಿಸಿ ಸರ್ಕಾರಕ್ಕೆ ಸಹಕರಿಸಬೇಕು.**

| **ಡಾ.ಸಿ.ಎನ್. ಮಂಜುನಾಥ್** ತಾಂತ್ರಿಕ ಸಲಹಾ ಸಮಿತಿ ಸದಸ್ಯ

ಅಗತ್ಯವೆಂದು ಸಲಹಾ ಸಮಿತಿಯ ಕೆಲವು ಸದಸ್ಯರು ಸಲಹೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಏರುಮುಖವಾಗಿರುವ ಸೋಂಕು ಪ್ರಕರಣಗಳಲ್ಲಿ ಬೆಂಗಳೂರಿನದೇ ಹೆಚ್ಚಿನ ಪಾಲಿದೆ. ಸಂಭಾವ್ಯ ಸಂಕಷ್ಟ ನಿವಾರಣೆ, ಸೋಂಕು ಸರಪಳಿ ತುಂಡರಿಸಲು ಕನಿಷ್ಠ 10 ದಿನಗಳ ಲಾಕ್‌ಡೌನ್ ಜಾರಿ ಅನಿವಾರ್ಯವೆಂದು ತಮ್ಮ ನಿಲುವು ಸಮರ್ಥಿಸಿಕೊಂಡಿದ್ದಾರೆ. ಹಾಗೆಯೇ ಜನರಲ್ಲಿ ಜಾಗೃತಿ ಮೂಡಿಸಲು ಆಯ್ದ 8 ನಗರಗಳಲ್ಲಿ ರಾತ್ರಿ ಕರ್ಫ್ಯೂ ಜಾರಿಗೊಳಿಸಲಾಗಿದೆ. ಏ.20ರವರೆಗೆ ನಿಗದಿತ ಅವಧಿಯನ್ನು ಏಪ್ರಿಲ್ ಅಂತ್ಯದ ವರೆಗೆ ವಿಸ್ತರಿಸಿ, ಪ್ರಕರಣಗಳು ಹೆಚ್ಚಿರುವ ಒಟ್ಟು 13 ಜಿಲ್ಲಾ ಕೇಂದ್ರಗಳಿಗೆ ಅನ್ವಯಿಸಬೇಕು ಎಂಬ ಸಲಹೆಯನ್ನು ಕೆಲವು ತಜ್ಞರು ನೀಡಿದರು ಎಂದು ಮೂಲಗಳು ಹೇಳಿವೆ. ಆದರೆ ಸಚಿವ ಸುಧಾಕರ್ ಲಾಕ್‌ಡೌನ್‌ಗೆ ಸಿಎಂ ಒಲವಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಈ ಸರ್ಕಾರಕ್ಕೆ ಇದು ಸಾಧ್ಯವಿಲ್ಲ. ಹೀಗಾಗಿ ಪರ್ಯಾಯ ಮಾರ್ಗ ತಿಳಿಸುವಂತೆ ಸಮಿತಿಯ ಗಮನಕ್ಕೆ ತಂದರು.

**ನೈಟ್‌ಕರ್ಫ್ಯೂ ಕಟ್ಟುನಿಟ್ಟು:** ರಾಯಚೂರೆ ಜಿಲ್ಲೆಯ ಮುದಗಲ್‌ನಲ್ಲಿ ಮಾತನಾಡಿದ ಸಿಎಂ ಬಿಎಸ್‌ವೈ, ನೈಟ್ ಕರ್ಫ್ಯೂ ಹಿನ್ನೆಲೆಯಲ್ಲಿ ಕಟ್ಟುನಿಟ್ಟಿನ ಕ್ರಮ ಕೈಕೊಳ್ಳಲಾಗುವುದು ಎಂದು ಹೇಳಿದ್ದಾರೆ.